# ಆಫರ್ ಹಾವಳಿ

ಸೀರೆ ಅಂಗಡಿಯ ರೆಸ್ಟ್ ರೂಂನಲ್ಲಿ ಗಂಡಸರ ವಿಶ್ರಾಂತಿಗಾಗಿ ಕುರ್ಚಿ–ಹಾಸಿಗೆ ವ್ಯವಸ್ಥೆ ಮಾಡಲಾಗಿತ್ತು. ಸೀರೆ ಅಂಗಡಿ ಮಾಲೀಕರ ಮಾನವೀಯತೆ ಮೆಚ್ಚಿಕೊಂಡ ಶಂಕ್ರಿ. ಅಲ್ಲಿ ಕೆಲವರು ಹಾಸಿಗೆಯಲ್ಲಿ ಉರುಳಿ ಗೊರಕೆ ಹೊಡೆಯುತ್ತಿದ್ದರು.




**ಮಣ್ಣೆ ರಾಜು**
ಕಲೆ: ಈಶ್ವರ ಬಡಿಗೇರ

ದೀಪಾವಳಿ ಹಬ್ಬದ ಬಟ್ಟೆ ಖರೀದಿಸಲು ಹೆಂಡ್ತಿ ಜೊತೆ ಶಂಕ್ರಿ ಬೈಕ್ ಏರಿ ಹೊರಟುಬಂದಿದ್ದ. ರಸ್ತೆಯುದ್ದಕ್ಕೂ ಅಂಗಡಿಗಳ ಎದುರು ಹಬ್ಬದ ಆಫರ್ ಆಹ್ವಾನದ ಫಲಕಗಳು ರಾಚಿದವು. ಹಣ್ಣಿನ ಅಂಗಡಿಯಿಂದ ಆಭರಣ ಅಂಗಡಿವರೆಗೂ ಆಕರ್ಷಕ ಆಫರ್, ರಿಯಾಯಿತಿ ಮಾರಾಟದ ಸೆಳೆತ.

‘ಇದು ದೀಪಾವಳಿಯೋ, ಆಫರ್ ಹಾವಳಿಯೋ...’ ಅಂತ ಶಂಕ್ರಿ ಗಾಬರಿಯಾದ. ಬೈಕ್‌ನಲ್ಲಿ ಹಿಂದೆ ಕುಳಿತ ಪತ್ನಿ ಸುಮಿ ಎಲ್ಲಾ ಫಲಕಗಳನ್ನು ಆಸೆಯಿಂದ ನೋಡುತ್ತಾ ಕಣ್ಣು ತುಂಬಿಕೊಳ್ಳುತ್ತಿದ್ದಳು. ಕಡೆಗೆ, ಸುಮಿ ಸೂಚಿಸಿದ ಅಂಗಡಿ ಮುಂದೆ ಶಂಕ್ರಿ ಬೈಕ್ ನಿಲ್ಲಿಸಿದ.

‘ಹಬ್ಬ ಹರಿದಿನಗಳಲ್ಲಿ ಓನರ್‌ಗಳು ಮನೆ ಬಾಡಿಗೆಗೆ ರಿಯಾಯಿತಿ ನೀಡುವ ಪದ್ದತಿ ಇರಬೇಕಾಗಿತ್ತು, ಬಂಕ್‌ನವರು ಹಬ್ಬಗಳಲ್ಲಿ ಡಿಸ್ಕೌಂಟ್ ರೇಟಿನಲ್ಲಿ ಪೆಟ್ರೋಲ್ ಮಾರುವ ಭಾಗ್ಯ ಬೇಕಾಗಿತ್ತು’ ಅಂತ ಶಂಕ್ರಿ ಅಂದುಕೊಂಡ.

ಆನಂದದಿಂದ ಸುಮಿ ಸೀರೆ ಅಂಗಡಿ ಪ್ರವೇಶಿಸಿದಳು. ಶಂಕ್ರಿ ಹಿಂಬಾಲಿಸಿದ. ಅಂಗಡಿ ಒಳಗೆ ಬರುತ್ತಿದ್ದಂತೆ ಅಲ್ಲೊಬ್ಬ ಇಬ್ಬರಿಗೂ ಜ್ಯೂಸ್ ಕೊಟ್ಟು ಸ್ವಾಗತಿಸಿದ. ಒಳಗಿರುವವರನ್ನು ಆಚೆ ಬಿಡಬಾರದು ಎನ್ನುವಂತೆ ಇನ್ನೊಬ್ಬ ಎ.ಸಿ. ಶೋ ರೂಂ ಬಾಗಿಲು ಮುಚ್ಚಿದ.

ಅಂಗಡಿಯಲ್ಲಿ ಜನಜಂಗುಳಿ. ಹಬ್ಬದ ಭರ್ಜರಿ ವ್ಯಾಪಾರ. ಮಹಿಳೆಯರ ಸಂಭ್ರಮ, ಪತ್ನಿಯರ ಸಂಭ್ರಮಕ್ಕೆ ಭಂಗ ಆಗಬಾರದೆಂದು ಗಂಡಂದಿರು ಕಾಟ ಕೊಡುವ ಮಕ್ಕಳ ಎತ್ತಿಕೊಂಡು ಆರೈಕೆ–ಪೂರೈಕೆ ಮಾಡುತ್ತಾ ನಿಭಾಯಿಸುವಲ್ಲಿ ಹೈರಾಣಾಗಿದ್ದರು.

ಜನಜಂಗುಳಿ ಮಧ್ಯೆ ಜಾಗ ಮಾಡಿಕೊಂಡು ನುಗ್ಗಿದ ಸುಮಿ, ತನಗೊಪ್ಪುವ, ಗಂಡನ ಜೇಬಿನ ಸಾಮರ್ಥ್ಯಕ್ಕೆ ಹೊಂದುವ ಸೀರೆಗಳನ್ನು ತೆಗೆಸಿ ಒಂದೊಂದನ್ನೇ ಪರಿಶೀಲಿಸಲು ಶುರುಮಾಡಿದಳು. ಸೀರೆಗಳ ಗುಣಮಟ್ಟವನ್ನು ಕಣ್ಣಿನಲ್ಲೇ ಅಂದಾಜು ಮಾಡಿದಳು. ಬಣ್ಣ, ಬಾರ್ಡರ್, ಡಿಸೈನ್, ಸೆರಗಿನ ಸೊಬಗನ್ನು ಸೂಕ್ಷ್ಮವಾಗಿ ಪರೀಕ್ಷಿಸಿದಳು. ಯಾವುದನ್ನೂ ಆರಿಸಲಾಗದೆ ಗೊಂದಲಕ್ಕೆ ಬಿದ್ದಳು.

ಹೆಂಡ್ತಿ ವ್ಯಾಪಾರ ಮುಗಿಸುವುದನ್ನು ಕಾಯುತ್ತಾ ಶಂಕ್ರಿ ಆಕಳಿಸುತ್ತಾ ಬಳಲಿದ. ಇವನ ಪರಿಸ್ಥಿತಿ ಕಂಡ ಅಂಗಡಿಯವನು ‘ಆ ಕಡೆ ಗಂಡಸರ ರೆಸ್ಟ್ ರೂಂ ಇದೆ, ಹೋಗಿ ರಿಲ್ಯಾಕ್ಸ್ ಮಾಡಿಕೊಳ್ಳಿ ಸಾರ್...’ ಅಂದ. ರೆಸ್ಟ್ ರೂಂನಲ್ಲಿ ಗಂಡಸರ ವಿಶ್ರಾಂತಿಗಾಗಿ ಕುರ್ಚಿ–ಹಾಸಿಗೆ ವ್ಯವಸ್ಥೆ ಮಾಡಲಾಗಿತ್ತು. ಸೀರೆ ಅಂಗಡಿ ಮಾಲೀಕರ ಮಾನವೀಯತೆ ಮೆಚ್ಚಿಕೊಂಡ ಶಂಕ್ರಿ. ಅಲ್ಲಿ ಕೆಲವರು ಹಾಸಿಗೆಯಲ್ಲಿ ಉರುಳಿ ಗೊರಕೆ ಹೊಡೆಯುತ್ತಿದ್ದರು. ಇತರರು ಕುರ್ಚಿಯಲ್ಲಿ ಕುಳಿತೇ ತೂಕಡಿಸುತ್ತಿದ್ದರು.

‘ಹೆಂಡ್ತಿಯ ಸೀರೆ ಖರೀದಿಗೆಂದು ಇವತ್ತು ಆಫೀಸಿಗೆ ರಜೆ ಹಾಕಿ ಬಂದಿದ್ದೇನೆ ಸಾರ್. ಸೀರೆ ಅಂಗಡಿಯವರೇ ನಮಗೆ ತಿಂಡಿ, ಊಟದ ವ್ಯವಸ್ಥೆ ಮಾಡಿದರು, ಅದರ ಬಿಲ್ ಮಾತ್ರ ನಾವು ಪೇ ಮಾಡಿದೆವು ಅಷ್ಟೇ...’ ಎಂದು ಒಬ್ಬ ಅಳುವ ಮಗುವಿಗೆ ಐಸ್‌ಕ್ರೀಂ ತಿನಿಸುತ್ತಾ ಹೇಳಿದ.

ಕೆಲವರು ಮಗುವನ್ನು ಹೆಗಲ ಮೇಲೆ ಹಾಕಿಕೊಂಡು ಜೋಜೋ ಮಾಡಿ ಮಲಗಿಸಿದ್ದರು. ತಾವೂ ನಿದ್ರೆ ಮಂಪರಿನ ಜೋಲಿ ಹೊಡೆಯುತ್ತಿದ್ದರು.

ರೆಸ್ಟ್ ರೂಂನಲ್ಲಿ ಶಂಕ್ರಿಗೆ ಉಸಿರುಕಟ್ಟಿದಂತಾಗಿ ಅಂಗಡಿಗೆ ಬಂದ. ಸುಮಿಯ ಸೀರೆ ಆಯ್ಕೆ ಅಂತಿಮ ಹಂತಕ್ಕೆ ಬಂದಿತ್ತು. ಕೊನೆ ಸುತ್ತಿನ ಹತ್ತು ಸೀರೆಗಳ ಪೈಕಿ ಒಂದನ್ನು ಆರಿಸಬೇಕಾಗಿತ್ತು. ಆರಿಸಲಾಗದೆ ಒದ್ದಾಡುತ್ತಿದ್ದಳು.

‘ನಿಮ್ಮ ಗಂಡನ ಸಜೆಷನ್ ತಗೊಳ್ಳಿ, ಇಷ್ಟು ಚೆನ್ನಾಗಿರುವ ನಿಮ್ಮನ್ನೇ ಆರಿಸಿಕೊಂಡಿದ್ದಾರೆ ಅಂದಮೇಲೆ ಒಳ್ಳೆ ಸೀರೆಯನ್ನೇ ಆರಿಸುತ್ತಾರೆ’ ಅಂದಳು ಸೇಲ್ಸ್ ಗರ್ಲ್.

‘ನಾನಂತೂ ಒಳ್ಳೆ ಗಂಡನನ್ನು ಆರಿಸಲಿಲ್ಲ, ಗುಣಮಟ್ಟದ ಸೀರೆಯನ್ನಾದರೂ ಆಯ್ಕೆ ಮಾಡುವ ಜಾಣತನ ತೋರಬೇಕು’ ಎಂದು ಸುಮಿ ಗೊಣಗಿಕೊಂಡು, ‘ಇವರಿಗೆ ಫ್ರೆಶ್ ತರಕಾರಿ ಆರಿಸಲೇ ಬರೊಲ್ಲ, ಇನ್ನು ಸೀರೆ ಆರಿಸ್ತಾರಾ...’ ಎಂದು ಕೇವಲವಾಗಿ ಹೇಳಿದಾಗ ಸೇಲ್ಸ್ ಗರ್ಲ್ ಕಿಸಕ್ಕನೆ ನಕ್ಕಳು. ಸೀರೆ ಅಂಗಡಿಯಲ್ಲಿ ಗಂಡಂದಿರಿಗೆ ಇಂತಹ ಮುಖಭಂಗ ಸಹಜ ಅಂತ ಶಂಕ್ರಿ ಸಹಿಸಿಕೊಂಡ.

‘ಏನೇನು ಆಫರ್ ಇದೆ?...’ ಎಂದು ಶಂಕ್ರಿ ಸೇಲ್ಸ್ ಗರ್ಲ್ ಜೊತೆ ಟೈಂ ಪಾಸ್ ಮಾತಿಗಿಳಿದ.

‘ಮಹಿಳೆಯರಿಗೆ ವಿಶೇಷ ಕೊಡುಗೆ, ಮಕ್ಕಳಿಗೆ ಅಗ್ಗದ ಉಡುಗೆ, ಸೀರೆ ಕೊಂಡರೆ ನೈಟಿ ಉಚಿತ. ನಮ್ಮಲ್ಲಿ ರೇಷ್ಮೆ ಸೀರೆ ಖರೀದಿಸಿದವರು ಹಬ್ಬದ ದಿನ ಇಲ್ಲಿಗೆ ಬಂದರೆ ಲೇಟೆಸ್ಟ್ ಶೈಲಿಯಲ್ಲಿ ನಾವೇ ಉಡಿಸಿ ಕಳಿಸ್ತೀವಿ, ಸೀರೆ ಉಡಿಸುವ ಸೇವಾ ಶುಲ್ಕ ಉಚಿತ...’ ಅಂದಳು.

‘ಗಂಡಂದಿರಿಗೆ ಆಫರ್ ಇಲ್ವಾ?’ ಆಸೆಯಿಂದ ಕೇಳಿದ.

‘ಗಂಡಂದಿರಿಗೆ ಇನ್ನೇರುತ್ತೆ, ಸೀರೆ ಬಿಲ್ ಪೇ ಮಾಡಿದ್ರೆ ಒಂದು ಪ್ಯಾಕೆಟ್ ಶೇವಿಂಗ್ ಬ್ಲೇಡ್ ಫ್ರೀ ಕೊಡಬಹುದು, ತಲೆಹರಟೆ ನಿಲ್ಲಿಸಿ ಸುಮ್ನೆ ಬನ್ರೀ...’ ಎಂದು ರೇಗುತ್ತಾ ಸುಮಿ, ಸೀರೆ ಸೆಲೆಕ್ಷನ್ ಮುಗಿಸಿ ಕ್ಯಾಷ್ ಕೌಂಟರ್ ಬಳಿ ಬಂದಳು.

ಪ್ರತಿಕ್ರಿಯಿಸಿ: **feedback@sudha.co.in**